**ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.**

**ಮಹಿಳಾ ಸಹಕಾರ ಸಂಘಗಳಿಗೆ ಸರ್ಕಾರದ ಪ್ರತ್ಯೇಕ ಷೇರು ಹಣ.**

3433- ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ಸರ್ಕಾರ ದಿಂದ ಪ್ರತ್ಯೇಕ ಶೇರುಹಣವನ್ನು ಕೊಡುವ ವ್ಯವಸ್ಥೆ ಇದೆಯೇ?*
2. *ಸಹಕಾರ ಸಂಘಗಳಿಗೆ ನಾಮಕರಣ ಮಾಡುವಾಗ ಮಹಿಳಾ ಪ್ರತಿನಿಧಿಗಳನ್ನು ಕಡ್ಡಾಯವಾಗಿ ನೇಮಕ ಮಾಡುವ ಯೋಜನೆ ಸರ್ಕಾರಕ್ಕಿದೆಯೇ?*
3. *ಹಾಗಿದ್ದಲ್ಲಿ ಅದನ್ನು ಕೂಡಲೇ ಜಾರಿಗೆ ತರಲಾಗುವುದೇ?*

ಶ್ರೀ ಎಸ್. ಆರ್. ಮೋರೆ. (ಸಹಕಾರ ರಾಜ್ಯ ಸಚಿವರು) :

1. ಇದೆ.

2. ಇಲ್ಲಾ.

3. ಸಹಕಾರ ಸಂಘಗಳ ಕಾಯ್ದೆ 1959ರ ನಿಯಮ 28(ಎ) ಪ್ರಕಾರ ಈಗಾಗಲೇ ಒಂದು ಮಹಿಳಾ ಪ್ರತಿನಿಧಿಗೆ ಆಡಳಿತ ಮಂಡಳಿಯಲ್ಲಿ ಅವಕಾಶ ಇರುವುದರಿಂದ ಸರ್ಕಾರ ಮಹಿಳಾ ಪ್ರತಿನಿಧಿಗಳನ್ನು ಸರ್ಕಾರದ ನಾಮಿನಿಯಾಗಿ ನೇಮಕ ಮಾಡುವು ಅವಶ್ಯಕತೆತ ಕಂಡು ಬರುವುದಿಲ್ಲ.

**ಹೊಸದುರ್ಗ ತಾಲ್ಲೂಕಿನಲ್ಲಿ ಕೃಷಿಮತ್ತು ಗ್ರಾಮಿಣಾಭಿವೃದ್ಧಿ ಬ್ಯಾಂಕಿನ ರಚತ ಮಹೋತ್ಸವದ ಆಚರಣೆ**

3372 - ಶ್ರೀ ಇ. ವಿಜಯ ಕುಮಾರು (ಹೊಸದುರ್ಗ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) *ಹೊಸದುರ್ಗ ತಾಲ್ಲೂಕಿನ ಕೃಷಿ ಮತ್ತು ಗ್ರಾಮಿಣಾಭಿವೃದ್ಧಿ ಬ್ಯಾಂಕ್ ರಜತ ಮಹೋತ್ಸಾವವನ್ನು ಆಚರಿಸಿದೆಯೇ*

ಆ) *ಹಾಗಿದ್ದಲ್ಲಿ ಇದಕ್ಕಾಗಿ ಬ್ಯಾಂಕಿನ ವತಿಯಿಂದ ಹಣ ವಿಚ್ಚು ಮಾಡಲಾಗಿದೆಯೇ?*

ಶ್ರೀ ಎಸ್.ಆರ್.ಮೋರೆ (ಸಹಕಾರ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

**ಕೈಗಾರಿಕೆಗಳಿಂದ ವಿದ್ಯುತ್ ಶುಲ್ಕದ ಬಾಕಿ**

3426 - ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿವಿಧ ಕೈಗಾರಿಕೆಗಳಿಂದ ವಿದ್ಯುಚ್ಛಕ್ತಿ ಶುಲ್ಕದ ಬಾಬ್ತು ಮೊತ್ತದ ಹಣವು ಬಾಕಿಯಿರುವುದು ನಿಜವೆ?*